ಎಂ.ವಿ.ಸಿ - 522/2025
ಪಿ.ಡಬ್ಲ್ಯು - 01

**ದಿನಾಂಕ : 04-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 2 ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತದ ಸಮಯದಲ್ಲಿ ವಾಹನವನ್ನು ನನ್ನ ತಮ್ಮ ವಿರಾಜ್ ಚಲಾಯಿಸುತ್ತಿದ್ದ . ನಾವು ಕೋಡಿಬೆಂಗ್ರೆಯಿಂದ ಉಡುಪಿಗೆ ಹೋಗುತಿದ್ದೆವು. ನಾನು ಮತ್ತು ನನ್ನ ತಮ್ಮ ವಿರಾಜ್ ಹೆಲ್ಮೆಟ್ ಹಾಕಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮ ವಿರಾಜ್ ನಿಧಾನವಾಗಿ ವಾಹನವನ್ನು ಚಲಾಯಿಸುತಿದ್ದ . ನನಗೆ ದ್ವಿ ಚಕ್ರ ವಾಹನವನ್ನು ಚಲಾಯಿಸಲು ಬರುತ್ತದೆ . ನಾವು ಹೋಗುತಿದ್ದ ವಾಹನ ನನ್ನ ತಮ್ಮ ವಿರಾಜ್ ಗೆ ಸೇರಿರುತ್ತದೆ . ನನ್ನ ತಮ್ಮ ವಿರಾಜ್ ನಿಗೆ ವಾಹನ ಚಲಾಯಿಸಲು ಚಾಲನ ಪರವಾನಿಗೆ ಇರಲಿಲ್ಲ . ನಾನು ದ್ವಿ ಚಕ್ರ ವಾಹನದಲ್ಲಿ ಎರಡು ಕಡೆ ಕಾಲುಗಳನ್ನು ಹಾಕಿಕೊಂಡು ರಸ್ತೆಗೆ ಮುಖ ಮಾಡಿ ಹಿಂಭಾಗದಲ್ಲಿ ಕುಳಿತಿದ್ದೆ. ಅಪಘಾತಪಡಿಸಿದೆ ಎನ್ನಲಾದ ವಾಹನವನ್ನು ಅಪಘಾತದ ಮೊದಲು ನಾನು ನೋಡಲಿಲ್ಲ. ದ್ವಿ ಚಕ್ರ ವಾಹನದಲ್ಲಿ ಯಾವ ಯಾವ ಬಿಡಿಭಾಗಗಳು ಇದೆ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ದ್ವಿ ಚಕ್ರ ವಾಹನಕ್ಕೆ 2 ಮಿರರ್ ಗಳು ಇದ್ದವು . ವಾಹನವನ್ನು ನೋಡಿ ಒಮ್ಮೆಲೇ ನನ್ನ ತಮ್ಮ ವಿರಾಜ್ ಬ್ರೇಕ್ ಹಾಕಿದ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಮತ್ತೊಂದು ವಾಹನ ನಮ್ಮ ವಾಹನದ ಹಿಂಬದಿಗೆ ಡಿಕ್ಕಿಪಡಿಸಿತು ಎಂದುತಿಳಿಸಿರುತ್ತಾರೆ . ನಮ್ಮ ಮತ್ತು ಮತ್ತೊಂದು ವಾಹನದ ನಡುವೆ ಇತರೇ ಯಾವುದೇ ವಾಹನ ಇರಲಿಲ್ಲ . ಅಪಘಾತಪಡಿಸಿದ ವಾಹನ ನಮ್ಮ ಹಿಂಬದಿಯಿಂದ ಬಂದಿರುತ್ತದೆ . ನಮ್ಮ ವಾಹನದ ಬಲಭಾಗಕ್ಕೆ ಸದ್ರಿ ವಾಹನ ತಾಗಿರುತ್ತದೆ .

ಜಂಕ್ಷನ್ ನಿಂದ ಸ್ವಲ್ಪ ದೂರದಲ್ಲಿ ಅಪಘಾತ ಆಗಿರುತ್ತದೆ . ಹಿಂದಿನಿಂದ ಬಂದ ವಾಹನ ಮುಂದಕ್ಕೆ ಹೋಗಲು ಅನುವು ಮಾಡಿ ಕೊಡದೇ ಅಡ್ಡದಿಡ್ಡಿಯಾಗಿ ನನ್ನ ತಮ್ಮ ಚಲಾಯಿಸಿ ಅಪಘಾತಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಈ ಅಪಘಾತಕ್ಕೆ ಎರಡನೇ ಎದುರುದಾರರ ವಿಮೆಗೆ ಒಳಪಟ್ಟ ವಾಹನದ ಚಾಲಕನ ತಪ್ಪಿನಿಂದ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ.

ಅಪಘಾತದ ಸಮಯದಲ್ಲಿ ದ್ವಿ ಚಕ್ರ ವಾಹನ ನನ್ನ ತಮ್ಮನ ಮಾಲೀಕತ್ವಕ್ಕೆ ಒಳಪಟ್ಟಿತ್ತು. ಅದಕ್ಕೆ ಸಂಬಂದಪಟ್ಟ ಆರ್ ಸಿ ಯನ್ನು ಹಾಜರುಪಡಿಸಿರುತ್ತೇನೆ. ನನ್ನ ತಮ್ಮನ ವಾಹನ 2020 ರ ಮೋಡೆಲ್ ಎಂದರೆ ಸರಿ. ನನ್ನ ತಮ್ಮನ ವಾಹನಕ್ಕೆ ಈ ಮೊದಲು ಡ್ಯಾಮೇಜ್ ಆಗಿದ್ದ ಬಗ್ಗೆ ಮತ್ತು ಬೇರೆ ಅಪಘಾತ ಆಗಿದ್ದ ಬಗ್ಗೆ ನನಗೆ ಗೊತ್ತಿಲ್ಲ . ಸದರಿ ವಾಹನವನ್ನು ಆಗಾಗ್ಗೆ ಸರ್ವೀಸ್ ಗೆ ಬಿಟ್ಟ ಬಗ್ಗೆ ದಾಖಲೆ ಇರುತ್ತದೆ ಆದರೇ ಹಾಜರುಪಡಿಸಿಲ್ಲ. ಸರ್ವೇಯರ್ ಎಷ್ಟು ಬಾರಿ ಸರ್ವೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ . ವಾಹನ ಸರ್ವೆ ಮಾಡುವಾಗ ನಾನು ಇರಲಿಲ್ಲ ಎಂದರೆ ಸರಿ . ನಾವು ಸರ್ವೆ ಮಾಡಿಸಿಲ್ಲ, ಸರ್ವೆ ವರದಿ ಹಾಕಿಲ್ಲ . ನಾವು ಹಾಜರುಪಡಿಸಿರುವ ಎಸ್ಟಿಮೇಟ್ ಬಿಲ್ಲು Hond Matrix ರವರು ಕೊಟ್ಟಿರುದಾಗಿರುತ್ತದೆ. ನಾವು ನಿಖರವಾದ ಬಿಲ್ಲನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ Honda matrix ರವರು ಕೊಟ್ಟಿರುವ ಬಿಲ್ಲು ಜಿಎಸ್‌ಟಿ ಬಿಲ್ಲು ಆಗಿರುತ್ತದೆ . ನಾವು ಹಣ ಖರ್ಚು ಮಾಡಿದ ಬಗ್ಗೆ ನ್ಯಾಯಲಯಕ್ಕೆ ದಾಖಲೆಯನ್ನು ಹಾಜರುಪಡಿಸಬಹುದು . ನಾವು ವಾಹನವನ್ನು ರಿಪೇರಿ ಮಾಡಿಸಿದ ಶೋರೂಮ್ authorized showroom ಆಗಿರುತ್ತದೆ.

ಅಪಘಾತವಾದ ಸಮಯದಲ್ಲಿ ನಮ್ಮ ವಾಹನಕ್ಕೆ ಯಾವ ಕಂಪೆನಿಯ ವಿಮೆ ಇತ್ತು ಎಂದು ನನಗೆ ಗೊತ್ತಿಲ್ಲ . ಆದರೇ ಪಾಲಿಸಿಯನ್ನು ಹಾಜರುಪಸಿದ್ದೇವೆ . ನಮ್ಮ ಪಾಲಿಸಿ 3rd party insurance ಆಗಿರುತ್ತದೆ . ವಾಹನ ರಿಪೇರಿಗೆ ನನ್ನ ತಮ್ಮ ಯಾವುದೇ ಹಣ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನಾವು ಯಾವುದೇ ಹಣ ಖರ್ಚು ಮಾಡದೇ ಇದ್ದರೂ ಕೂಡ showroom ಅವರಿಂದ fake bill ನ್ನು ಪಡೆದು ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಅರ್ಜಿಯ ಪ್ರಕಾರ ಅಪಘಾತದ ಮೊದಲು ನನ್ನ ತಮ್ಮ ಹೊರದೇಶದಲ್ಲಿ ಕೆಲಸ ಮಾಡುತಿದ್ದರಿಂದ ಆತನ ಹೆಸರಿನಲ್ಲಿ ಇದ್ದ ವಾಹನವನ್ನು ನನ್ನ ತಂದೆ ಚಲಾಯಿಸುತಿದ್ದರು. ವಾಹನ ರಿಪೇರಿಗೆ ಮತ್ತು ಆ ಸಮಯದಲ್ಲಿ ಓಡಾಟಕ್ಕೆ ಯಾವುದೇ ಹಣ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತ ನನ್ನ ತಮ್ಮನ ಅಜಾಗರೂಕತೆ ಮತ್ತು ನಿರ್ಲಕ್ಷ್ಯತನದಿಂದ ಆಗಿದ್ದು, 2 ನೇ ಎದುರುದಾರರು ಯಾವುದೇ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ ಉಡುಪಿ.